ವೈಶಾಖ ಮಾಸದ ಬಿಸಿಲು ಮುಖಕ್ಕೆ ರಾಚುತ್ತಿತ್ತು. ಗಾಳಿಯ ಹೆಸರಿಲ್ಲ. ಮರಗಳು ಅಲ್ಲಾಡದೆ ಸ್ತಬ್ಧವಾಗಿದ್ದು, ಅಲ್ಲಾಡಿಸಿ ಗಾಳಿ ಬರಿಸಿದರೆ ಹೇಗೆ ಎನ್ನುವ ರೀತಿ ಮಾಡಿತ್ತು. ಜೊತೆಗೆ ಕರೆಂಟ್ ಕಟ್ ಬೇರೆ. ನವರಂಧ್ರಗಳಿಂದ ಒಸರುವ ಬೆವರು, ಕುಡಿದಷ್ಟೂ ಕುಡಿಯಬೇಕೆನಿಸುವ ನೀರು, ಒಟ್ಟಾರೆ ಈ ಬೇಸಿಗೆ ಏತಕ್ಕೆ ಬರುತ್ತದೋ ಎಂದುಕೊಂಡು ಪಾಲ್ ನೆಲದ ಮೇಲೆ ಮೈ ಚೆಲ್ಲಿ ಮಲಗಿದ್ದ. ನೆಲದ ಮೇಲೆ ಮಲಗಿದ್ದರೂ ಆಪ್ಯಾಯಮಾನವೆನಿಸಲಿಲ್ಲ. ಕಿಟಕಿ ತೆರೆದಿದ್ದರೂ ಬಿಸಿಲಿನ ಝಳಕ್ಕೆ ಸಾಕೆನಿಸುವಂತೆ ಮಾಡಿತ್ತು. ಅಷ್ಟರಲ್ಲಿಯೇ ಕರೆಂಟು ಬಂದಿತು. ಅಬ್ಬಾ ಹೋದ ಜೀವ ಬಂದಂತಾಯಿತು ಎಂದುಕೊಂಡು ಮುಖಕ್ಕೆ ಒಂದಿಷ್ಟು ತಣ್ಣೀರು ಹಾಕಿಕೊಂಡು, ಟವಲ್‌ನಿಂದ ಒರೆಸುತ್ತಿರುವಾಗಲೇ ಹೊರಗಡೆ ತಮಟೆಯ ಸದ್ದು ಕೇಳಿಸಿತು. ಏನಿರಬಹುದು ಈ ಮಟ ಮಟ ಮಧ್ಯಾಹ್ನದಲ್ಲಿ ಎಂದುಕೊಂಡು ಕಿಟಕಿಯಿಂದಲೇ ಇಣುಕಿ ನೋಡಿದ ಪಾಲ್. ಆಗ ತಿಳಿದದ್ದು, ಅವನೊಬ್ಬ ಊರೊಳಗೆ ಟಾಂ, ಟಾಂ ಬಾರಿಸುವವ. ಏನೋ ಸುದ್ದಿ, ತಂತ್ರಜ್ಞಾನ ಎಷ್ಟೇ ಮುಂದುವರಿದರೂ ನಮ್ಮ ಹಳೆಯ ಸುದ್ದಿ ಪಬ್ಲಿಸಿಟಿ ಇನ್ನೂ ಮಾಸಿಲ್ಲವಲ್ಲ ಎಂದುಕೊಳ್ಳುತ್ತಿರುವಾಗಲೇ, ಟಾಂ ಟಾಂ ನವರ ಧ್ವನಿ ಕೇಳಿಸಿತ್ತು. 'ಕೇಳ್ರಪ್ಪೋ ಕೇಳಿ, ಊರಿನಾಗೆ ಈ ವರ್ಷ ಮಳೆ ಬಂದಿಲ್ಲ. ಈಗಾಗ್ಲೇ ಎರಡು ಮಳೆ ಒಂಟೋಗಿದವೆ. ಇಂಗೆಯಾ ಆದ್ರೆ, ಜನ ದನಕರುಗಳು, ಮೇವಿಗೆ, ಬೇಸಾಯಕ್ಕೆ ನೀರೇ ಇರ್ಕಿಲ್ಲ. ಅದ್ಕೆ ಊರಿನ ಪಂಚರು ಒಂದು ತೀರ್ಮಾನಕ್ಕೆ ಬಂದವ್ರೆ. ನಾಳಿದ್ದು ಅಂದ್ರೆ, ಗುರುವಾರ ಬೆಳಿಗ್ಗೆ 10 ಗಂಟೆಗೆ ನಮ್ಮೂರ ಮಸಾಣದಲ್ಲಿ ಯಾರಾದ್ರೂ ತೊನ್ನು ಇರೋವ್ರನ್ನು ಊತಾಕಿದ್ರೆ ಅದನ್ನು ತೆಗಿತಾರಂತೆ. ಯಾರಾದ್ರು ಹಾಗೆ ಮಾಡಿದ್ರೆ, ಪಂಚಾಯಿತಿಗೆ ಬಂದು ತಿಳಿಸ್ಬೇಕಂತೆ'. ಮತ್ತೆ ಟಮಟಮ ಡಬಡಬ ಸದ್ದು. ಅಯ್ಯೋ, ಈ ಆಧುನಿಕ ಯುಗದಲ್ಲೂ ಮೂಢನಂಬಿಕೆಯೇ!?, ಇವರಿಗೆಲ್ಲಾ ತಿಳ್ಯೋದು ಹೇಗೆ? ಇರಲಿ ಯಾವುದಕ್ಕೂ ಒಮ್ಮೆ ಸಂಜೆ ಪಂಚಾಯಿತಿ ಕಟ್ಟೆ ಹೋಗಿ ಬರೋಣವೆಂದುಕೊಂಡ ಪಾಲ್.

ಪಂಚಾಯಿತಿ ಕಟ್ಟೆಗೆ ಹೋಗುವಾಗ, ಗೋವಿಂದೇಗೌಡರು ಸಿಕ್ಕಿದರು. 'ಏನು ಗೌಡ್ರೆ, ಮಧ್ಯಾಹ್ನ ಟಾಂ ಟಾಂ ಕೇಳಿದೆ. ನೀವೂ ನಂಬ್ತೀರಾ ಇದನ್ನು?' ಕೇಳಿದ. 'ನೋಡಪ್ಪಾ ತಮ್ಮ, ಕೆಲವೊಮ್ಮೆ ನಂಬಲೇ ಬೇಕು. ನಾನು ಚಿಕ್ಕವನಿದ್ದಾಗ ಒಮ್ಮೆ ಹೀಗೆ ಆಗಿತ್ತಂತೆ. ಆಗ ಊರಲ್ಲಿ ಎಲ್ರೂ ಮಾತನಾಡಿಕೊಂಡಾಗ ಒಬ್ರು ತೊನ್ನು ಬಂದಿರೋ ವ್ಯಕ್ತಿಯನ್ನು ಹೂತಿದ್ರಂತೆ. ಹೀಗಾಗಿ ಮಳೆ ಬರದೆ ಹೋಗಿತ್ತು. ಅದೇನಾಶ್ಚರ್ಯ ಅಂತೀನಿ, ಇನ್ನೂ ಗುಂಡಿ ಒಡೆದು ಹೆಣ ತೆಗೆಯೋದ್ರಲ್ಲೇ ಮಳೆ, ಅಸಾಧ್ಯ ಮಳೆ ಬಂತಂತೆ. ಅಷ್ಟೇ ಏಕೆ, ಟಿವಿನಾಗೆ ಯಾರೋ ಸ್ವಾಮಿಗಳನ್ನು ನಾಲ್ಕು ವರ್ಷದ ಕೆಳಗೆ ಹೂತು ಹಾಕಿ ಗದ್ದಿಗೆ ಮಾಡಿದ್ರಂತಲ್ಲಾ, ಅದು ಸುಳ್ಳಾ, ಟಿವಿನಾಗೆ ಪೇಪರ್‌ನಾಗೆ ಎಲ್ಲಾ ಬಂತಲ್ಲ, ನೀನೂ ನೋಡಿರಬೇಕಲ್ಲ' ಹುಬ್ಬು ಕುಣಿಸಿದರು ಗೌಡ್ರು.

'ಅಲ್ಲಾ ಅದು ಕಾಕತಾಳೀಯವಿರಬಹುದು, ಅದರ ಬದಲಿಗೆ ಒಂದಿಪ್ಪತ್ತು ಕ್ವಿಂಟಲ್ ಉಪ್ಪನ್ನು ದೊಡ್ಡ ಬಯಲಿನಲ್ಲಿ ಒಂದಿಷ್ಟು ಸೌದೆಯೊಂದಿಗೆ ಉರಿಸಿದರೆ ಹೇಗೆ?' ತನ್ನಲ್ಲಿದ್ದ ವಿಜ್ಞಾನದ ಜ್ಞಾನ ಪ್ರದರ್ಶಿಸಿದ್ದ ಪಾಲ್. 'ಓದಿರೋರಿಗೆ ಹೇಳಿದ್ರೆ ಇಂಗೇಯಾ. ನೋಡು ಒಂದ್ವಿಸ್ಯ ಹೇಳ್ತೀನಿ, ನೀನು ಬಂದು ನೋಡು ಮತ್ತೆ. ತೊನ್ನು ಬಂದು ಸತ್ತಿರೋವ್ರನ್ನು ಹೂತಿದ್ರೆ, ಅಂಥ ಹೆಣ ಕೊಳಿಯೋದಿಲ್ಲ. ಜತೆಗೆ ಅದರ ಉಗುರು, ಕೂದಲು ಬೆಳೆದಿರುತ್ವೆ. ಬೇಕಾದ್ರೆ ನೀನು ಬಂದು ಪರೀಕ್ಷೆ ಮಾಡು' ಗೌಡ್ರು ಮೀಸೆ ತಿರುವುತ್ತಾ ಹೇಳಿದ್ದರು.

'ಗೌಡ್ರೆ, ನಿಮ್ಮ ಮಕ್ಕಳು ವಿದೇಶಕ್ಕೆ ಹೋಗಿದ್ರೂ ತಂತ್ರಜ್ಞಾನ ಇಷ್ಟೆಲ್ಲಾ ಮುಂದುವರಿದಿದ್ದರೂ ಇನ್ನೂ ನೀವೂ ನಿಮ್ಮ ಹಳೆ ವರಸೆ ಮುಂದುವರಿಸ್ತಾ ಇದೀರಲ್ಲ, ಅದ್ಸರಿ, ನಿಮ್ಮ ಪಂಚಾಯಿತಿಯವರು ಈಗ ನಾಲ್ಕು ತಿಂಗಳ ಹಿಂದೆ ಊರ ಹೊರಗೆ ಅದೇನೋ ಹೈವೇ ಮಾಡ್ತಾರಂತೆ ಅಂತ ಇದ್ದ ಬದ್ದ ಮರಗಳನ್ನೆಲ್ಲಾ ಕಡಿದ್ರಲ್ಲ, ಅದರ ಫಲವೇ ಇದು. ಈ ರೀತಿ ರಸ್ತೆ ಅಗಲೀಕರಣ, ನಗರೀಕರಣ ಎಂದೆಲ್ಲಾ ಹೇಳಿಕೊಂಡು ಕಾಡು ನಾಶ ಮಾಡ್ತಾ ಇದ್ರೆ ಮಳೆ ಬರುತ್ತಾ, ಖಂಡಿತ ಇಲ್ಲಾ ಗೌಡ್ರೆ, ಬರೀ ನಮ್ಮ ರೈತ ಆಕಾಶ ನೋಡಿಕೊಂಡು ಕಣ್ಣೀರು ಸುರಿಸ್ಬೇಕಷ್ಟೆ' ಪಾಲ್ ಮತ್ತೊಮ್ಮೆ ಗೌಡರಿಗೆ ಕಿಚಾಯಿಸಿದ.

'ಹೇಳು, ಅಭಿವೃದ್ಧಿ ಅಂತ ಬಡಕೊಳ್ಳೊ ನಿಮಗೆ ಇದೆಲ್ಲಾ ಗೊತ್ತಾಗಕಿಲ್ಲ' ಎಂದು ಅಸಹನೆಯಿಂದ ಟವಲ್ ಅನ್ನು ಕೊಡವಿ ಹೊರಟೇ ಬಿಟ್ಟರು ಗೌಡರು.

ಇದುವರೆಗೂ ಹೂತು ಹಾಕಿದ್ದ ಹೆಣ ತೆಗೆದ ಪ್ರಸಂಗಗಳ ಬಗ್ಗೆ ಕೇಳಿದ್ದ ಪಾಲ್‌ಗೆ ಈ ಬಾರಿ ಇದನ್ನು ನೋಡುವ ಅವಕಾಶ ಬಂದಿತ್ತು. ಆದರೆ ಜೊತೆಯಲ್ಲಿ ಭಯವೂ ತಳುಕು ಹಾಕಿಕೊಂಡಿತ್ತು. ಆದದ್ದಾಗಲಿ ಒಮ್ಮೆ ನೋಡಿದರೆ ಹೇಗೆ ಎಂದುಕೊಂಡು ಆ ದಿನವನ್ನೇ ಕಾಯುತ್ತಿದ್ದ. ಕೊನೆಗೆ ಶನಿವಾರ ಬೆಳಿಗ್ಗೆ 10 ಗಂಟೆಗೆ ಪಂಚಾಯಿತಿ ಬಳಿ ಜನರೆಲ್ಲಾ ಸೇರಿದ್ರು. ಪೋಲಿಸರು, ತಹಸೀಲ್ದಾರರು, ಮುಖಂಡರು.. ಹೀಗೆ. ಅಲ್ಲೊಬ್ಬ ಓದಲು ಶುರು ಮಾಡಿದ್ದ, 'ಮಹಾಜನಗಳೇ, ಈ ಸಲ ಮಳೆ ಕೈ ಕೊಟ್ಟಿದೆ. ಅದಕ್ಕೆ ಹಲವಾರು ಕಾರಣಗಳಿರಬಹುದು, ವೈಜ್ಞಾನಿಕ ಕಾರಣಗಳೂ ಇರಬಹುದು. ಆದರೆ, ನಮ್ಮೂರಿನ ಹಿರಿಯರು ತೀರ್ಮಾನಕ್ಕೆ ಬಂದಿರೋ ರೀತಿ ತೊನ್ನು ಬಂದು ಸತ್ತಿರೋವ್ರನ್ನ ಹೂತು ಹಾಕಿದ್ರೆ, ಮಳೆ ಆಗಲ್ವಂತೆ. ಅದಕ್ಕೆ ಈವತ್ತು ಅಂಥ ಶವಗಳನ್ನು ಹೊರತೆಗೆದು ಅವರ ಸಂಬಂಧಿಕರ ಅನುಮತಿಯೊಂದಿಗೆ ಪುನಃ ಸುಡಲಾಗುತ್ತೆ' ಕೂಗಿ ಹೇಳಿದ. ಅವನ ಮಾತುಗಳು ಮುಗಿದ ನಂತರ ಕೆಲವು ದಾಖಲೆಗಳಿಗೆ ತಹಸೀಲ್ದಾರ್ ಸಹಿ ಮಾಡಿದರು.

ಅಲ್ಲೇ ಇದ್ದ ಪಾಲ್ ಇದನ್ನೆಲ್ಲಾ ಉಸಿರು ಬಿಗಿ ಹಿಡಿದು ನೋಡುತ್ತಿದ್ದ. ಹೊರ ತೆಗೆದ ಶವ ಹೇಗಿರುತ್ತದೆ? ಶವ ಕೆಟ್ಟು ವಿಕಾರವಾಗಿರುತ್ತದೋ, ಇಲ್ಲಾ ವಾಸನೆ ಇರುತ್ತದೆಯೋ, ಅಥವಾ ಮಣ್ಣಲ್ಲೇ ಕಳಿತು ಹೋಗಿರುತ್ತದೋ, ಹೀಗೆಲ್ಲಾ ಜಿಜ್ಞಾಸೆಗಳು ಆತನ ತಲೆ ತುಂಬಾ ತುಂಬಿಕೊಂಡು ನೃತ್ಯ ಮಾಡುತ್ತಿದ್ದವು.

ಅಂದು ಒಟ್ಟು ಮೂರು ಮನೆಗಳಲ್ಲಿನ ಶವಗಳನ್ನು ಗುರುತು ಮಾಡಿದ್ದರು. ಮೊದಲನೆಯದು ಸಣ್ಣಮ್ಮ, ಆಕೆಗೂ ತೊನ್ನಿತ್ತಂತೆ, ಆದರೆ ದಫನ್ ಮಾಡಕ್ಕೆ ಹಣ ಇಲ್ಲದೆ ಅವಳನ್ನು ಹಾಗೇ ಹೂತಿದ್ರಂತೆ. ಇನ್ನು ಎರಡನೆಯದು ವೀರಭದ್ರಸ್ವಾಮಿಯವರು. ಅವರು 90 ವರ್ಷಗಳು ವಾಸವಿದ್ದು ಶಿವನ ಪಾದ ಸೇರಿದ್ದರು. ಆದರೆ ಲಿಂಗಾಯಿತ ಸಂಪ್ರದಾಯದಂತೆ ಅವರನ್ನೂ ಮಣ್ಣು ಮಾಡಲಾಗಿತ್ತು. ಆದರೆ ಅವರಿಗೆ ತೊನ್ನಿರುವುದು ಯಾರಿಗೂ ಗೊತ್ತಿರಲಿಲ್ಲ. ಹೀಗಾಗಿ ಮನೆಯವರಿಂದ ಮಾತ್ರ ಅದು ಗೊತ್ತಾಗಿ ಆ ಶವವನ್ನೂ ಹೊರತೆಗೆಯಲು ಅವರ ಮನೆಯವರು ಅನುಮತಿ ನೀಡಿದ್ದರು. ಇನ್ನು ಮೂರನೆಯದಾಗಿ,ಊರ ಹೊರಗೆ ಇದ್ದ ಒಬ್ಬ ಭಿಕ್ಷುಕ. ಆತನಿಗೆ ಕಜ್ಜಿಯೋ ತೊನ್ನೋ ಗೊತ್ತಿಲ್ಲ. ಅತನ ಹೆಸರೂ ಇಲ್ಲಿ ಬಂದು ಬಿಟ್ಟಿತ್ತು. ಮೊದಲಿಗೆ ಅದೇನೋ ಪೂಜೆ ಮಾಡಿದರು, ಒಂದು ಮಡಕೆಯಲ್ಲಿ ನಿಂಬೆಹಣ್ಣು, ಹೂವು, ವೀಳೆದೆಲೆ ಇಟ್ಟು ಅದನ್ನು ಸಮಾಧಿಯ ಸುತ್ತಲೂ ಬಳಸಿ ಬಂದು ಒಡೆದರು. ನಂತರ ಒಂದು ಕೋಳಿಯನ್ನು ಕತ್ತರಿಸಿ ಅದರ ರಕ್ತವನ್ನು ಸಮಾಧಿಯ ಮುಂದೆ ಹಿಡಿದರು. ಅಯ್ಯೋ, ಮನುಷ್ಯ ಎಷ್ಟು ಕ್ರೂರಿ, ಇದ್ದಾಗಲೂ ಹಿಂಸಿಸುವ ಪ್ರವೃತ್ತಿ, ಸತ್ತ ಮೇಲೂ ಬಿಡುವುದಿಲ್ಲವಲ್ಲ ಎಂದು ಮನಸ್ಸಿನಲ್ಲೇ ಅಂದುಕೊಂಡ ಪಾಲ್.

ಆ ನಂತರ ಒಂದಿಷ್ಟು ಬೇವಿನ ಎಲೆಗಳನ್ನು ಹರಡಿದರು. ಈಗ ಶುರು ಮಾಡಿ ಎಂದು ಹೇಳಿದರು. ಮೊದಲಿಗೆ ಸಣ್ಣಮ್ಮನ ಸಮಾಧಿ ಅಗೆದರು. ಸಣ್ಣಮ್ಮ ಸತ್ತು ಸುಮಾರು 10 ತಿಂಗಳಾಗಿತ್ತು. ಸಮಾಧಿಯಲ್ಲಿಟ್ಟ ವೀಳೆದೆಲೆ, ಬಾಳೆಹಣ್ಣು, ಕೆಟ್ಟಿರಲಿಲ್ಲ. ಉಸಿರು ಬಿಗಿಹಿಡಿದು ನೋಡುತ್ತಿದ್ದ ಪಾಲ್‌ಗೆ ಕೊನೆಗೆ ಗೋಚರಿಸಿತು. ಅರೆ, ಶವದ ಮುಖ ವಿಕಾರವಾಗಿರಲಿಲ್ಲ. ಬಿಳಿಚಿಕೊಂಡಿತ್ತು. ಕೂದಲುಗಳು ಹಾಗೆಯೇ ಇದ್ದವು, ಉಗುರುಗಳು ಬೆಳೆದಿರುವುದನ್ನು ಅಗೆದವರು ಮೇಲಿದ್ದವರಿಗೆ ತೋರಿಸಿದ್ದರು. ಗುಂಡಿಯಿಂದ ಮೇಲಕ್ಕೆ ತೆಗೆದ ಶವವನ್ನು ಪಕ್ಕದಲ್ಲಿಯೇ ಚಿತೆ ಮಾಡಿದ್ದರ ಮೇಲೆ ಇಡಲಾಯಿತು. ಇನ್ನು ವೀರಭದ್ರಯ್ಯನವರ ಶವ. ಅದನ್ನೂ ಹಾಗೆಯೇ ಮಾಡಿ ತೆಗೆದರು.